# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕಾವೇರಿ ಜಲ ವಿವಾದ – ಡಾ॥ಕೆ.ಜಿ.ರಂಗರಾಜು, ಪ್ರಾಧ್ಯಾಪಕರು(ನಿವೃತ್ತ), ಐಐಟಿ, ರೂರ್ಕಿ ಇವರಿಗೆ ವೃತ್ತಿ ಶುಲ್ಕವನ್ನು ಪಾವತಿಸುವ ಬಗ್ಗೆ.

***

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಜಸಂಇ 21 ಕೃವಿಇ 2014 ದಿನಾಂಕ:12.09.2014.

2) ಸರ್ಕಾರದ ಆದೇಶ ಸಂಖ್ಯೆ: ಜಸಂಇ 27 ಮವಿಇ 2016 ದಿನಾಂಕ:14.03.2017.

3) ಸರ್ಕಾರದ ಆದೇಶ ಸಂಖ್ಯೆ: ಜಸಂಇ 124 ಕಾವಿಇ 2016 ದಿನಾಂಕ:19.07.2017.

4) ಸರ್ಕಾರದ ಆದೇಶ ಸಂಖ್ಯೆ: ಜಸಂಇ 97 ಕಾವಿಇ 2017 ದಿನಾಂಕ:05.12.2017.

5) ಸರ್ಕಾರದ ಆದೇಶ ಸಂಖ್ಯೆ: ಜಸಂಇ 17 ಮವಿಇ 2018 ದಿನಾಂಕ:26.06.2018.

6) ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಪತ್ರ ಸಂ: ಜಸಅ/ಮುಇಂ(ಅಂರಾಜ)/ಕಾಜವಿ/2018-19/1002 ದಿನಾಂಕ:11.09.2018.

ಪ್ರಸ್ತಾವನೆ:

ಡಾ॥ ಕೆ.ಜಿ.ರಂಗರಾಜು, ಪ್ರಾಧ್ಯಾಪಕರು(ನಿವೃತ್ತ), ಐಐಟಿ, ರೂರ್ಕಿ ಇವರ ಸೇವೆಯನ್ನು ಕೃಷ್ಣಾ, ಮಹದಾಯಿ ಮತ್ತು ಪೋಲ್ಲಾವರಂ ಯೋಜನೆಗಳ ಜಲ ವಿವಾದ ಸಂಬಂಧದಲ್ಲಿ ಪಡೆಯಲು ದಿನಾಂಕ:12.09.2014ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿರುವ ವೃತ್ತಿ ಶುಲ್ಕ ಹಾಗೂ ಇತರೆ ಸೌಲಭ್ಯಗಳೊಂದಿಗೆ ಸದರಿಯವರ ಸೇವೆಯನ್ನು ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ, ದಿನಾಂಕ:17.09.2016ರಿಂದ ಪೂರ್ವಾನ್ವಯವಾಗುವಂತೆ ಪಡೆಯಲು ಮೇಲೆ ಓದಲಾದ ಕ್ರಮಸಂಖ್ಯೆ (3)ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

2. ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ, ಶ್ರೀಯುತರ ವೃತ್ತಿ ಶುಲ್ಕವನ್ನು ಮೇಲೆ ಓದಲಾದ ಕ್ರಮಸಂಖ್ಯೆ (4)ರ ಆದೇಶದಲ್ಲಿ ದಿನಾಂಕ:17.09.2016ರಿಂದ ಪೂರ್ವಾನ್ವಯವಾಗುವಂತೆ ಪರಿಷ್ಕರಿಸಿ, ಇತರೆ ಸೌಲಭ್ಯಗಳನ್ನು ದಿನಾಂಕ:12.09.2014ರ ಆದೇಶದಲ್ಲಿರುವಂತೆ ಮುಂದುವರೆಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

3. ಕೃಷ್ಣಾ, ಮಹದಾಯಿ ಹಾಗೂ ಪೋಲ್ಲಾವರಂ ಜಲ ವಿವಾದಗಳಿಗೆ ಸಂಬಂಧಿಸಿದಂತೆ ಶ್ರೀಯುತರ ಸೇವೆಯನ್ನು ಪಡೆಯಲು ಮೇಲೆ ಓದಲಾದ ಕ್ರಮಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ ಪರಿಷ್ಕರಿಸಲಾಗಿರುವ ವೃತ್ತಿ ಶುಲ್ಕದ ಬಾಬ್ತನ್ನು ಪ್ರವಾಸದ ದಿನಗಳೂ ಸೇರಿದಂತೆ ಅನ್ವಯಿಸಲು ಮೇಲೆ ಓದಲಾದ ಕ್ರಮಸಂಖ್ಯೆ (5)ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

4. ಡಾ॥ಕೆ.ಜಿ.ರಂಗರಾಜು ಇವರು ಮುಖ್ಯ ಇಂಜಿನಿಯರ್(ಅಂತರ ರಾಜ್ಯ ಜಲ) ಇವರಿಗೆ ಬರೆದಿರುವ ದಿನಾಂಕ:18.08.2018ರ ಪತ್ರದಲ್ಲಿ ಶ್ರೀಯುತರು ಕೃಷ್ಣಾ, ಮಹದಾಯಿ ಹಾಗೂ ಪೋಲ್ಲಾವರಂ ಜಲ ವಿವಾದಗಳ ವಿಷಯದಲ್ಲಿ ಮೇಲೆ ಓದಲಾದ ಕ್ರಮಸಂಖ್ಯೆ (5)ರ ಸರ್ಕಾರದ ಆದೇಶವನ್ನು ಉಲ್ಲೇಖಿಸಿ, ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ, ವೃತ್ತಿ ಶುಲ್ಕವನ್ನು ಪ್ರಯಾಣದ ದಿನಗಳೂ ಸೇರಿದಂತೆ ಪಾವತಿಸಲು ಕೋರಿರುವುದಾಗಿ ಮುಖ್ಯ ಇಂಜಿನಿಯರ್‌ರವರು ಮೇಲೆ ಓದಲಾದ ಕ್ರಮಸಂಖ್ಯೆ (6)ರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

5. ಕೃಷ್ಣಾ, ಮಹದಾಯಿ ಹಾಗೂ ಪೋಲ್ಲಾವರಂ ಜಲ ವಿವಾದಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ದಿನಾಂಕ:26.06.2018ರ ಆದೇಶವನ್ನು ಕಾವೇರಿ ಜಲ ವಿವಾದಕ್ಕೂ ಅನ್ವಯವಾಗುವಂತೆ, ವೃತ್ತಿಶುಲ್ಕದ ಬಾಬ್ತನ್ನು ಪ್ರಯಾಣದ ದಿನಗಳೂ ಸೇರಿದಂತೆ ದಿನಾಂಕ:17.09.2016ರಿಂದ ಪೂರ್ವಾನ್ವಯವಾಗುವಂತೆ ಡಾ॥ಕೆ.ಜಿ.ರಂಗರಾಜುರವರಿಗೆ ಪಾವತಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

6. ಮುಖ್ಯ ಇಂಜಿನಿಯರ್‌ರವರು ಸಲ್ಲಿಸಿರುವ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂ: ಜಸಂಇ 73 ಕಾವಿಇ 2018, ಬೆಂಗಳೂರು,**
**ದಿನಾಂಕ:01.01.2019.**

ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಡಾ||ಕೆ.ಜಿ.ರಂಗರಾಜು, ಪ್ರಾಧ್ಯಾಪಕರು(ನಿವೃತ್ತ), ಐ.ಐ.ಟಿ., ರೂರ್ಕಿ ಇವರ ಸೇವೆಯನ್ನು ಪಡೆಯಲು ಸರ್ಕಾರದ ಆದೇಶ ಸಂಖ್ಯೆ: ಜಸಂಇ 97 ಕಾವಿಇ 2017 ದಿನಾಂಕ:05.12.2017ರಲ್ಲಿ ಪರಿಷ್ಕರಿಸಲಾಗಿರುವ ವೃತ್ತಿ ಶುಲ್ಕದ ಬಾಬ್ತನ್ನು ಪ್ರವಾಸದ ದಿನಗಳೂ ಸೇರಿದಂತೆ ದಿನಾಂಕ:17.09.2016ರಿಂದ ಪೂರ್ವಾನ್ವಯವಾಗುವಂತೆ ಅನ್ವಯಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

2. ಈ ಸಂಬಂಧ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2701-80-001-0-19-015 ಪೂರಕ ವೆಚ್ಚಗಳು ಇದರಡಿಯಲ್ಲಿ ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

3. ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 587 ಆಕೋ-1/2018 ದಿನಾಂಕ:22.11.2018ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

1/1/19

(ಎಂ.ಎಸ್.ಮೋಹನ್)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ),
ಜಲ ಸಂಪನ್ಮೂಲ ಇಲಾಖೆ.

ಪ್ರತಿಯನ್ನು :

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/(ಇ & ಆರ್.ಎಸ್.ಎ)/(ಎ & ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು.
3. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5. ಡಾ||ಕೆ.ಜಿ.ರಂಗರಾಜು, ಪ್ರಾಧ್ಯಾಪಕರು (ನಿವೃತ್ತ), ಐ.ಐ.ಟಿ., ರೂರ್ಕಿ.
   (ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಮುಖಾಂತರ)
6. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
9. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.